# ಮಾಗಡಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

## C.C. 571/2017

PW-1

ಹೆಸರು :- ರವಿಕುಮಾರ್

ದಿನಾಂಕ :- 26-11-2019

ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲುಃ ಆರೋಪಿತರ ಪರ ಎಸ್ ಎಲ್ ವಕೀಲರಿಂದಃ

1. ನಾನು ಬಿ.ಎ. ಪಧವಿದರನಾಗಿದೆದೇನೆ. ಆರೋಪಿತರು ನನಗೆ 4 ವರ್ಷಗಳಿಂದ ಪರಿಚಯವಾಗಿದ್ದಾರೆ. ಆರೋಪಿತರು ಹೋಟೆಲ್ ಇಟ್ಟುಕೊಂಡಿದ್ದರಿಂದ ಅವರು ನನಗೆ ಪರಿಚಯವಿದ್ದಾರೆ. ಆರೋಪಿತರು ನನಗೆ ಹೇಗೆ ಪರಿಚಯವಾಗಿದ್ದಾರೆ ಎಂದು ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಆರೋಪಿತರು ಹೋಟೆಲ್ ಕಟ್ಟಡವನ್ನು ಬೋಗ್ಯಕ್ಕೆ ಪಡೆಯುವ ಸಲುವಾಗಿ ಹಣ ಬೇಕಾಗಿದೆ ಎಂದು ನನ್ನ ಬಳಿ ಹಣ ಪಡೆದಿರುತ್ತಾರೆ. ಸದರಿ ವಿಷಯವನ್ನು ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿದ್ದೇನೆ. ನಾನು ಆರೋಪಿತರಿಗೆ ಹಣವನ್ನು ಹೊಟೆಲ್ ಕಟ್ಟಡದ ಮಾಲೀಕರ ಸಮಕ್ಷಮದಲ್ಲಿ ಮಾಗಡಿಯ ತಾಲ್ಲೂಕು ಕಛೇರಿಯ ಮಂಭಾಗದಲ್ಲಿ ನೀಡಿರುತ್ತೇನೆ. ನಾನು ಆರೋಪಿತರಿಗೆ ದಿನಾಂಕ 20-03-2017 ರಂದು ಹಣ ನೀಡಿದ್ದೆನು. ನಾನು ಆರೋಪಿತರಿಗೆ 500 ಮುಖಬೆಲೆಯ ನೋಟುಗಳನ್ನು ನೀಡಿದ್ದೆನು. ನನಗೆ ವ್ಯವಹಾರದಿಂದ ಹಣ ಬಂದಿತ್ತು ಅದೇ ಹಣವನ್ನು ನಾನು ಆರೋಪಿತರಿಗೆ ಕೊಟ್ಟಿರುತ್ತೇನೆ. ಆ ರೀತಿಯಾಗಿ ಯಾವ ಮೂಲದಿಂದ ನನಗೆ ಹಣ ಬಂದಿತ್ತು ಎಂದು ದೂರಿನಲ್ಲಾಗಲಿ ಅಥವಾ ಮುಖ್ಯ ವಿಚಾರಣೆಯಲ್ಲಿಯಾಗಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನನಗೆ ಆರೋಪಿತರಿಗೆ ಹಣ ನೀಡಲು ಯಾವ ಮೂಲದಿಂದ ಹಣ ಬಂದಿತ್ತು ಎಂದು ತೋರಿಸುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ನಿಜ.

2. ನಾನು ಕಳೆದ 10-12 ವರ್ಷಗಳಿಂದ ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ.

ನಾನು ಹೊಂದಿರುವ ಬ್ಯಾಂಕ್ ಖಾತೆಯ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ನನಗೆ ವಾರ್ಷಿಕ ಅಂದಾಜು 10 ಲಕ್ಷ ರೂಪಾಯಿ ಆದಾಯ ಇರುತ್ತದೆ. ನಾನು ಆದಾಯ ತೆರಿಗೆ ಪಾವತಿದಾರನಾಗಿರುತ್ತೇನೆ. ನನ್ನ ವಾರ್ಷಿಕ ಆದಾಯ ಮತ್ತು ತೆರಿಗೆ ಪಾವತಿಸಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಬಲ್ಲೆ. ಆ ಸಮಯದಲ್ಲಿ ಆರೋಪಿತರಿಗೆ ಹಣದ ಅಗತ್ಯತೆ ಇದ್ದ ಕಾರಣ ನಾನು ನಗಧಾಗಿ ಹಣ ನೀಡಿರುತ್ತೇನೆ, ಇಪ್ಪತ್ತು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಹಣವನ್ನು ಚೆಕ್ ಮೂಲಕ ನೀಡಲು ನನಗೇನು ತೊಂದರೆ ಇರಲಿಲ್ಲ. ಸಾಮಾನ್ಯವಾಗಿ ನಾನು ಮನೆಯಲ್ಲಿ ಖರ್ಚಿಗಾಗಿ ಅಂದಾಜು ಐವತ್ತು ಸಾವಿರ ರೂಪಾಯಿ ನಗದು ಹಣ ಇಟ್ಟುಕೊಂಡಿರುತ್ತೇನೆ.

3. ನಾನು ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ನೀಡಿದ ಚೆಕ್ ನಂಬರ್ 771772 ಇರುತ್ತದೆ. ಆರೋಪಿತರು ನನಗೆ ಚೆಕ್ ಹಾಳೆಯನ್ನು ದಿನಾಂಕ 22-04-2017 ರಂದು ನೀಡಿದ್ದರು. ಚೆಕ್ಅಮಾನ್ಯಗೊಂಡ ಬಗ್ಗೆ ಆರೋಪಿತರಿಗೆ ಚೆಕ್ ಮರಳಿ ಬಂದ ತಕ್ಷಣ ನಾನು ದೂರವಾಣಿ ಮೂಲಕ ಕೂಡ ವಿಷಯ ತಿಳಿಸಿದ್ದೆನು. ನಿಪಿ-1 ರ ಚೆಕ್ ಹಾಳೆಯಲ್ಲಿಯ ಹೆಸರು ಮತ್ತು ಮೊತ್ತವನ್ನು ಆರೋಪಿತರ ಜೊತೆ ಬಂದಿದ್ದ ವ್ಯಕ್ತಿ ಬರೆದಿರುತ್ತಾರೆ. ನಾನು ಆರೋಪಿತರಿಗೆ ಯಾವುದೇ ಹಣ ಕೊಟ್ಟಿಲ್ಲ ಆದರೂ ಸಹಿತ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.</u>

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ಮಾಗಡಿ